# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 21-7-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಭಾರತದ ಗೋಡಂಬಿ ತಿರುಳು ರಫ್ತು 2021–22 ರಲ್ಲಿ 9 ಶೇಕಡಾ ಹೆಚ್ಚಳ

ಭಾರತದಿಂದ 2020–21 ರಲ್ಲಿ 70.5 ಮಿಲಿಯನ್ ಕೆ.ಜಿ ಗೋಡಂಬಿ ತಿರುಳು ರಫ್ತು ಆಗಿದ್ದು 2021–22 ರಲ್ಲಿ 76.8 ಮಿಲಿಯನ್ ಕೆ.ಜಿ. ರಫ್ತಿನೊಂದಿಗೆ 9 ಶೇಕಡಾ ಹೆಚ್ಚಳ ಕಂಡಿವೆ. ಬೆಲೆಯಲ್ಲಿ 2021–21 ರಲ್ಲಿ 420 ಮಿಲಿಯನ್ ಅಮೆರಿಕನ್ ಡಾಲರ್‌ಗಳಿಂದ 2021–22 ಕ್ಕೆ 452 ಮಿಲಿಯನ್ ಅಮೆರಿಕನ್ ಡಾಲರ್‌ಗೆ ಹೆಚ್ಚಳಗೊಂಡು 7 ಶೇಕಡಾ ಪ್ರಗತಿ ಸಾಧಿಸಿದೆಯೆನ್ನಲಾಗಿದೆ. ಯು.ಎ.ಇ, ಭಾರತದ ಅತೀ ದೊಡ್ಡ ಗೋಡಂಬಿ ರಫ್ತು ದೇಶವಾಗಿದ್ದು 2021–22 ರ ಒಟ್ಟು ರಫ್ತಿನ 29 ಶೇಕಡಾ ಪಾಲು ಹೊಂದಿದೆಯೆನ್ನಲಾಗಿದೆ. 2020–21 ರಲ್ಲಿ 12.8 ಮಿಲಿಯನ್ ಕೆ.ಜಿ. ಗೋಡಂಬಿ ತಿರುಳು ಆಮದು ಮಾಡಿದ್ದ ಯು.ಎ.ಇ 2021–22 ಕ್ಕೆ 16.6 ಮಿಲಿಯನ್ ಕೆ.ಜಿ ಆಮದು ಮಾಡಿದೆ. ಮೌಲ್ಯ 2020–21 ರಲ್ಲಿ 98.5 ಮಿಲಿಯನ್ ಯು.ಎಸ್ ಡಾಲರ್ ಹಾಗೂ 2021–22 ರಲ್ಲಿ 131.5 ಮಿಲಿಯನ್ ಯು.ಎಸ್ ಡಾಲರ್ ಆಗಿದೆ. ಜಪಾನ್, ನೆದರ್‌ಲಾಂಡ್ ಭಾರತದಿಂದ ಪ್ರಮುಖ ತಿರುಳು ರಫ್ತು ಮಾಡಲ್ಪಡುವ ದೇಶಗಳಾಗಿದ್ದು, 13 ಶೇಕಡಾ ಹಾಗೂ 9 ಶೇಕಡಾ ರಫ್ತು ಪಾಲು ಹೊಂದಿದೆ. ಜಪಾನ್ ಹಾಗೂ ನೆದರ್‌ಲ್ಯಾಂಡ್ ಭಾರತದಿಂದ ಗೋಡಂಬಿ ಸಿಪ್ಪೆಯ ಎಣ್ಣೆ (CASHEW SHELL LIQUID) ಆಮದು ಮಾಡಿಕೊಳ್ಳುವ ದೇಶಗಳಾಗಿವೆ. ವಿಯೆಟ್ನಾಂ, ಭಾರತದಿಂದ ಗೋಡಂಬಿ ತಿರುಳು ಆಮದು ಮಾಡಿಕೊಳ್ಳುವ ಪ್ರಮುಖ ದೇಶವಾಗಿದ್ದು, 2016–17 ರಿಂದ 2021–22 ತನಕ ಆಮದು 7 ಶೇಕಡಾ ಪ್ರಗತಿ ಕಂಡಿದೆಯೆನ್ನಲಾಗಿದೆ. ದೇಶದ ಕಚ್ಚಾ ಗೋಡಂಬಿ ಉತ್ಪಾದನೆ ಹೆಚ್ಚಳಕ್ಕೆ ಭಾರತ ಸರಕಾರ, ಗೋಡಂಬಿ ಬೆಳೆಯುವ ಪ್ರದೇಶದ ವಿಸ್ತೀರ್ಣದ ಹೆಚ್ಚಳ, ಹೆಚ್ಚು ಇಳುವರಿಯ ತಳಿಗಳನ್ನು ಬೆಳೆಸುವುದು ಮುಂತಾದ ಯೋಜನೆಗಳನ್ನು ಹೊಂದಿ ಕಾರ್ಯಗತಗೊಳಿಸುತ್ತಿದೆಯೆನ್ನಲಾಗಿದೆ.